ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATION RESEARCH AND TRAINING
ಡಿ ಎಸ್ ಇ ಆರ್ ಟಿ
DSERT
NO 4, 100 FT RING ROAD, BANASHANKARI 3RD STAGE
BANGALORE 560 085
E MAIL:dpi.dsert@gmail.com , http://dsert.kar.nic.in
TEL NO: 26422372
26422373
26422374
FAX NO: 26422377

# ವಾರ್ಷಿಕ ಆಡಳಿತ ವರದಿ (2010–11)

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು ಸಾರ್ವಜನಿಕ ಶಿಕ್ಷಣ ಇಲಾಖೆಯ ಒಂದು ಅಂಗ. ಈ ಇಲಾಖೆಯು ಈ ಕೆಳಗೆ ನೀಡಿರುವ ವಿಭಾಗಗಳ ಮೂಲಕ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಿರ್ವಹಿಸುತ್ತಿದೆ.

**ಪರಿವಿಡಿ:** **ಪುಟ ಸಂಖ್ಯೆ**


1) ಡಿ.ಎಸ್.ಇ.ಆರ್.ಟಿ.ಯ ಧ್ಯೇಯ & ಪ್ರಮುಖ ಚಟುವಟಿಕೆಗಳು ...................... 1
2) ಇಲಾಖೆಯ ಅಂಗ ರಚನೆ ................................................................. 2
3) ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ......................................................... 4
4) ಶಿಕ್ಷಣ ತಂತ್ರಜ್ಞಾನ ಘಟಕ ............................................................... 5
5) ರಾಜ್ಯ ಶೈಕ್ಷಣಿಕ ಮೌಲ್ಯಮಾಪನ ಮತ್ತು ಶೈಕ್ಷಣಿಕ ವೃತ್ತಿ ಮಾರ್ಗದರ್ಶನ .............. 8
6) ರಾಷ್ಟ್ರೀಯ ಪ್ರತಿಭಾನ್ವೇಷಣಾ ಪರೀಕ್ಷೆ ..................................................... 9
7) ನ್ಯಾಶನಲ್ ಮೀನ್ಸ್–ಕಮ್–ಮೆರಿಟ್ ವಿದ್ಯಾರ್ಥಿವೇತನ ಪರೀಕ್ಷೆ ......................... 10
8) ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಯೋಜನೆ ............................................... 11
9) ಶಿಕ್ಷಕರ ಶಿಕ್ಷಣ ..................................................................................... 11
10) ಡಯಟ್ ಶಾಖೆ .................................................................................. 12
11) ಸರ್ವ ಶಿಕ್ಷಣ ಅಭಿಯಾನ ........................................................................ 12
12) ನಲಿ ಕಲಿ ........................................................................................ 13


## I) ಡಿ.ಎಸ್.ಇ.ಆರ್.ಟಿ. ಯ ಧ್ಯೇಯ ಮತ್ತು ಪ್ರಮುಖ ಚಟುವಟಿಕೆಗಳು

1. ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದು.
2. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಂತಗಳೆರಡೂ ಒಳಗೊಂಡಂತೆ ರಾಜ್ಯದಲ್ಲಿ ಶಿಕ್ಷಕ ಶಿಕ್ಷಣ ತರಬೇತಿಯ ನಿರ್ವಹಣೆ (ಸೇವಾ ಪೂರ್ವ ಮತ್ತು ಸೇವಾನಿರತ ಶಿಕ್ಷಣ)
3. ಶಿಕ್ಷಕ ಶಿಕ್ಷಣ ಮಹಾ ವಿದ್ಯಾಲಯಗಳು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು ಮತ್ತು ಇತರ ಶಿಕ್ಷಕ ತರಬೇತಿ ಸಂಸ್ಥೆಗಳ ನಿರ್ವಹಣೆ
4. ರಾಜ್ಯದಲ್ಲಿ ವಿಜ್ಞಾನ ಶಿಕ್ಷಣವನ್ನು ಪ್ರೋತ್ಸಾಹಿಸುವುದು.
5. ಶಾಲೆಗಳಿಗೆ ಬೋಧನೆ–ಕಲಿಕೆಯ ಸಾಮಗ್ರಿಗಳ ಸಂಗ್ರಹಣೆ ಹಾಗೂ ವಿತರಣೆ

6. ಪಠ್ಯ ವಿಷಯ, ಶಿಕ್ಷಣಶಾಸ್ತ್ರ, ಶಿಕ್ಷಣದಲ್ಲಿ ರಂಗ ಕಲೆಯಂತಹ ನವೀನ ಪದ್ಧತಿಗಳ ಅಳವಡಿಕೆ, ರಾಜ್ಯದಲ್ಲಿ ಕಡಿಮೆ ವೆಚ್ಚದ-ವೆಚ್ಚರಹಿತ ಬೋಧನೆ, ಕಲಿಕೆಯ ಸಾಮಗ್ರಿಗಳ ತಯಾರಿಕೆ ಮುಂತಾದ ಶಿಕ್ಷಕ ತರಬೇತಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಿ ಅನುಷ್ಠಾನಗೊಳಿಸುವುದು.
7. ಬಣ್ಣದ ಟಿ.ವಿ.ಗಳು, ದೃಕ್ ಶ್ರವಣ ಸುರುಳಿಗಳು, ಗಣಕ ಯಂತ್ರಗಳು, ಸಿ.ಡಿ. ರೋಮ್‌ಗಳು, ಪ್ರಯೋಗ ಶಾಲೆ ಮತ್ತು ಗ್ರಂಥಾಲಯ ಸಾಮಗ್ರಿಗಳು, ನಕ್ಷೆಗಳು, ಭೂಪಟಗಳು ಹಾಗೂ ಮಾದರಿಗಳನ್ನು ದೊರಕಿಸಿ ಶಾಲೆಗಳಿಗೆ ವಿತರಿಸುವುದು.
8. ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವುದು.
9. ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ನೇರವಾಗಿ ಎಜ್ಯುಸ್ಯಾಟ್ ಯೋಜನೆಯ ಮೂಲಕ ಸಂಪರ್ಕಿಸುವುದು.

## II ) ಇಲಾಖೆಯ ಅಂಗರಚನೆ :

ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ಶ್ರೇಣಿಯ ಅಧಿಕಾರಿಯು ಡಿ.ಎಸ್.ಇ.ಆರ್.ಟಿಯ ಮುಖ್ಯಸ್ಥರಾಗಿರುತ್ತಾರೆ. ಸಹ ನಿರ್ದೇಶಕರ ಶ್ರೇಣಿಯ ಅಧಿಕಾರಿಯು ಎಲ್ಲಾ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕರ್ತವ್ಯಗಳಲ್ಲಿ ನಿರ್ದೇಶಕರಿಗೆ ನೆರವು ನೀಡುತ್ತಾರೆ. ಇದಲ್ಲದೆ ಇಬ್ಬರು ಉಪ ನಿರ್ದೇಶಕರು ಮತ್ತು 14 ಹಿರಿಯ ಸಹಾಯಕ ನಿರ್ದೇಶಕರು ಡಿ.ಎಸ್.ಇ.ಆರ್.ಟಿ.ಯ ವಿವಿಧ ಶಾಖೆಗಳನ್ನು ತಮ್ಮ ಸಿಬ್ಬಂದಿಯೊಡಗೂಡಿ ನಿರ್ವಹಿಸುತ್ತಾರೆ. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (DIETs), ಡಿ.ಎಸ್.ಇ.ಆರ್.ಟಿ. ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಮೂಲಕ ಈ ಇಲಾಖೆಯು ಶಿಕ್ಷಣ ಇಲಾಖೆಯ ಸಚಿವಾಲಯದ ವ್ಯಾಪ್ತಿಗೆ ಒಳಪಟ್ಟಿದೆ. www.dsert.kar.nic.in ಈ ಇಲಾಖೆಯ ಅಧಿಕೃತ ವೆಬ್ ಸೈಟ್ ಆಗಿರುತ್ತದೆ.

### ಡಿ.ಎಸ್.ಇ.ಆರ್.ಟಿ. ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರಗಳು

| ಕ್ರಸಂ. | ಸಿಬ್ಬಂದಿಯ ವರ್ಗ | ಮಂಜೂರಾದ ಹುದ್ದೆಗಳ ಹೆಸರು | ಮಂಜೂರಾದ ಹುದ್ದೆಗಳ ಒಟ್ಟು ಸಂಖ್ಯೆ | ಭರ್ತಿ ಮಾಡಲ್ಪಟ್ಟ ಹುದ್ದೆಗಳ ಸಂಖ್ಯೆ | | | ಕಾಲಂ-6 ರಲ್ಲಿನ ಒಟ್ಟು ಭರ್ತಿ ಮಾಡಲ್ಪಟ್ಟ ಹುದ್ದೆಗಳಲ್ಲಿ | | ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|---|---|---|---|---|
| | | | | ಪುರುಷರು | ಸ್ತ್ರೀಯರು | ಒಟ್ಟು | ಪರಿಶಿಷ್ಟ ಜಾತಿಯವರ ಸಂಖ್ಯೆ | ಪರಿಶಿಷ್ಟ ಪಂಗಡದವರ ಸಂಖ್ಯೆ | |
| 1 | 2 | 3 | 4 | 5 | 6 | 7 | 8 | 9 | 10 |
| 1 | ಗ್ರೂಪ್ ಎ | ನಿರ್ದೇಶಕರು | 1 | 0 | 0 | 0 | 0 | 0 | 1 |
| 2 | ಗ್ರೂಪ್ ಎ | ಸಹ ನಿರ್ದೇಶಕರು | 1 | 1 | 0 | 1 | 0 | 0 | 0 |
| 3 | ಗ್ರೂಪ್ ಎ | ಉಪ ನಿರ್ದೇಶಕರು | 2 | 1 | 1 | 2 | 0 | 0 | 0 |
| 4 | ಗ್ರೂಪ್ ಎ | ಹಿರಿಯ ಸಹಾಯಕ ನಿರ್ದೇಶಕರು | 14 | 6 | 7 | 13 | 1 | 0 | 1 |
| 5 | ಗ್ರೂಪ್ ಎ | ಲೆಕ್ಕಾಧಿಕಾರಿಗಳು | 1 | 0 | 0 | 0 | 0 | 0 | 1 |

| | | | | | | | | | |
|---|---|---|---|---|---|---|---|---|---|
| 6 | ಗ್ರೂಪ್ ಬಿ | ಸಹಾಯಕ ನಿರ್ದೇಶಕರು(ಆಡಳಿತ) | 1 | 1 | 0 | 1 | 0 | 0 | 0 |
| 7 | ಗ್ರೂಪ್ ಬಿ | ಗ್ರಂಥಾಲಯ ಅಧಿಕಾರಿಗಳು | 1 | 1 | 0 | 1 | 0 | 0 | 0 |
| 8 | ಗ್ರೂಪ್ ಬಿ | ಸಾಂಖ್ಯಿಕ ಅಧಿಕಾರಿಗಳು | 1 | 1 | 0 | 1 | 0 | 0 | 0 |
| 9 | ಗ್ರೂಪ್ ಸಿ | ಅಧೀಕ್ಷಕರು | 4 | 4 | 0 | 4 | 0 | 0 | 0 |
| 10 | ಗ್ರೂಪ್ ಸಿ | ಸ.ಸಾಂ.ಅ. | 4 | 1 | 0 | 1 | 0 | 1 | 3 |
| 11 | ಗ್ರೂಪ್ ಸಿ | ತಾಂತ್ರಿಕ ಸಹಾಯಕರು | 5 | 3 | 0 | 3 | 0 | 0 | 2 |
| 12 | ಗ್ರೂಪ್ ಸಿ | ಗ್ರಂಥಪಾಲಕರು | 5 | 1 | 1 | 2 | 0 | 0 | 3 |
| 13 | ಗ್ರೂಪ್ ಸಿ | ಟೆಕ್ನೀಶಿಯನ್ | 2 | 2 | 0 | 2 | 0 | 0 | 0 |
| 14 | ಗ್ರೂಪ್ ಸಿ | ಕಲಾವಿದ | 1 | 1 | 0 | 1 | 0 | 0 | 0 |
| 15 | ಗ್ರೂಪ್ ಸಿ | ಶೀಘ್ರಲಿಪಿಗಾರರು | 4 | 0 | 2 | 2 | 0 | 0 | 2 |
| 16 | ಗ್ರೂಪ್ ಸಿ | ಪ್ರ.ದ.ಸ. | 22 | 17 | 5 | 22 | 0 | 1 | 0 |
| 17 | ಗ್ರೂಪ್ ಸಿ | ಕಾರ್ಪೆಂಟರ್ | 1 | 0 | 0 | 0 | 0 | 0 | 1 |
| 18 | ಗ್ರೂಪ್ ಸಿ | ಎಸ್.ಡಿ.ಎ. | 9 | 7 | 2 | 9 | 1 | 0 | 0 |
| 19 | ಗ್ರೂಪ್ ಸಿ | ಬೆರಳಚ್ಚುಗಾರರು | 6 | 0 | 2 | 2 | 0 | 0 | 4 |
| 20 | ಗ್ರೂಪ್ ಸಿ | ಟೈಪಿಂಗ್ ಅಸಿಸ್ಟಂಟ್ | 1 | 0 | 0 | 0 | 0 | 0 | 1 |
| 21 | ಗ್ರೂಪ್ ಸಿ | ಫೀಲ್ಡ್‌ಮ್ಯಾನ್ | 1 | 0 | 0 | 0 | 0 | 0 | 1 |
| 22 | ಗ್ರೂಪ್ ಸಿ | ಸಿ.ಸಿ.ಟಿ. | 3 | 1 | 2 | 3 | 0 | 0 | 0 |
| 23 | ಗ್ರೂಪ್ ಸಿ | ವಾಹನ ಚಾಲಕರು | 6 | 4 | 0 | 4 | 0 | 0 | 2 |
| 24 | ಗ್ರೂಪ್ ಡಿ | ಅಟೆಂಡರ್ | 12 | 0 | 0 | 0 | 0 | 0 | 12 |
| 25 | ಗ್ರೂಪ್ ಡಿ | ಜವಾನ | 22 | 8 | 8 | 16 | 0 | 1 | 6 |
| **ಒಟ್ಟು** | | | **130** | **60** | **30** | **90** | **2** | **3** | **40** |

## III ) ರಾಜ್ಯ ವಿಜ್ಞಾನ ಸಂಸ್ಥೆ ಮತ್ತು ತಂತ್ರಜ್ಞಾನ :

**ಅ) ರಾಜ್ಯ ವಿಜ್ಞಾನ ಸಂಸ್ಥೆ :** ವಿಜ್ಞಾನ ಮತ್ತು ಗಣಿತ ವಿಷಯಗಳ ಬೋಧನಾ ಮಟ್ಟವನ್ನು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಹಂತಗಳಲ್ಲಿ ಉತ್ತಮಪಡಿಸಿ, ವಿದ್ಯಾರ್ಥಿಗಳು ಹಾಗೂ ಶಿಕ್ಷಕರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಿ, ಆಸಕ್ತಿ ಮೂಡಿಸಿ ಕುಶಲತೆಗಳನ್ನು ಹೆಚ್ಚಿಸುವುದು ಮತ್ತು ನಿತ್ಯ ಜೀವನದಲ್ಲಿ ವೈಜ್ಞಾನಿಕತೆಯನ್ನು ಅಳವಡಿಸಿಕೊಳ್ಳುವಂತೆ ಮಾಡುವುದು ಈ ಸಂಸ್ಥೆಯ ಮುಖ್ಯ ಧ್ಯೇಯ. ಇದಕ್ಕೆ ಪೂರಕವಾಗಿರುವಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

**1. ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಚಾರ ಗೋಷ್ಠಿ :**

ಈ ಗೋಷ್ಠಿಯನ್ನು ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ವಿ.ಐ.ಟಿ.ಎಂ.ನ ಸಹಯೋಗದೊಂದಿಗೆ ನಡೆಸಲಾಗುತ್ತದೆ. ಜಿಲ್ಲಾ ಮಟ್ಟದಲ್ಲಿ ಅರ್ಹತೆ ಪಡೆದವರು ರಾಜ್ಯ ಮಟ್ಟದಲ್ಲಿ ಭಾಗವಹಿಸಲು ಅರ್ಹತೆ ಪಡೆಯುವರು. ಈ ಕಾರ್ಯಕ್ರಮಕ್ಕಾಗಿ ರೂ. 2.42 ಲಕ್ಷಗಳನ್ನು ವ್ಯಯಿಸಲಾಗಿದೆ. ರಾಜ್ಯ ಮಟ್ಟದ ಕಾರ್ಯಕ್ರಮವನ್ನು ದಾವಣಗೆರೆಯಲ್ಲಿ ದಿ. 16.10.2010 ರಂದು ನಡೆಸಲಾಯಿತು.

**2. ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ರಸ ಪ್ರಶ್ನೆ ಕಾರ್ಯಕ್ರಮ :**

ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸಹಯೋಗದೊಂದಿಗೆ ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಗ್ರಾಮೀಣ ಮತ್ತು ಶಹರ ಎಂದು ಪ್ರತ್ಯೇಕವಾಗಿ ವಿಜ್ಞಾನ ರಸ ಪ್ರಶ್ನೆ ಕಾರ್ಯಕ್ರಮವನ್ನು ನಡೆಸಲಾಗಿದೆ. ಇದಕ್ಕೆ ಡಿ.ಎಸ್.ಇ.ಆರ್.ಟಿ. ವತಿಯಿಂದ ರೂ. 1.24 ಲಕ್ಷಗಳ ಅನುದಾನವನ್ನು ಕ.ರಾ.ವಿ.ಪ.ಗೆ ನೀಡಿದೆ. ರಾಜ್ಯ ಮಟ್ಟದ ಸ್ಪರ್ಧೆಯು 2011ರ ಫೆಬ್ರುವರಿ ಮಾಹೆಯಲ್ಲಿ ನಡೆದಿದೆ.

**3. ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ವಸ್ತು ಪ್ರದರ್ಶನ :**

ವಿಜ್ಞಾನದ ಸದುಪಯೋಗದ ಬಗ್ಗೆ ತಿಳುವಳಿಕೆ ಮೂಡಿಸಲು ಎನ್.ಸಿ.ಇ.ಆರ್.ಟಿ.ಯ ಮಾರ್ಗಸೂಚಿಯಂತೆ ಸದರಿ ಕಾರ್ಯಕ್ರಮವನ್ನು ಜಿಲ್ಲಾ, ರಾಜ್ಯ, ವಿಭಾಗ ಮತ್ತು ರಾಷ್ಟ್ರ ಮಟ್ಟದಲ್ಲಿ ನಡೆಸಲಾಗುತ್ತದೆ. ಇದಕ್ಕಾಗಿ ರೂ. 9.37 ಲಕ್ಷ ವೆಚ್ಚವಾಗಿದೆ. ಈ ಕಾರ್ಯಕ್ರಮವನ್ನು ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯದ (ವಿ.ಐ.ಟಿ.ಎಂ.) ಸಹಯೋಗದೊಂದಿಗೆ ನಡೆಸಲಾಗಿದೆ. ರಾಜ್ಯ ಮಟ್ಟದ ಕಾರ್ಯಕ್ರಮವನ್ನು ಜನವರಿ 9 ರಿಂದ 11 ರವರೆಗೆ ಬೆಳಗಾವಿಯಲ್ಲಿ ನಡೆಸಿದ್ದು, ಪಾಂಡಿಚೇರಿಯಲ್ಲಿ ಜನವರಿ 20 ರಿಂದ 24 ರವರೆಗೆ ವಲಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನವನ್ನು ನಡೆಸಲಾಗಿದೆ.

**4. ಪ್ರೌಢ ಶಾಲಾ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ನಾಟಕ ಸ್ಪರ್ಧೆ:**

ಈ ನಾಟಕ ಸ್ಪರ್ಧೆಯನ್ನು ಜಿಲ್ಲಾ, ವಿಭಾಗ, ರಾಜ್ಯ, ವಲಯ, ರಾಷ್ಟ್ರ ಮಟ್ಟದಲ್ಲಿ ವಿ.ಐ.ಟಿ.ಎಂ.ನ ಸಹಯೋಗದೊಂದಿಗೆ ನಡೆಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಪ್ರಥಮ ಬಹುಮಾನ ಪಡೆದ 8 ವಿದ್ಯಾರ್ಥಿಗಳು ಮತ್ತು ಒಬ್ಬ ಮಾರ್ಗದರ್ಶಿ ಶಿಕ್ಷಕರ ಒಂದು ತಂಡವು ವಿಭಾಗ ಮಟ್ಟದಲ್ಲಿ ಭಾಗವಹಿಸಿ, ಅಲ್ಲಿ ಪ್ರಥಮ ಸ್ಥಾನ ಪಡೆದ ತಂಡ ರಾಜ್ಯ ಮಟ್ಟ, ವಲಯ ಮಟ್ಟ, ಹೀಗೆ ರಾಷ್ಟ್ರ ಮಟ್ಟ ತಲುಪುತ್ತದೆ. ಇದಕ್ಕೆ ರೂ.3.42 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. ರಾಜ್ಯ ಮಟ್ಟದ ಸ್ಪರ್ಧೆಯನ್ನು ಜನವರಿ 9 ರಿಂದ 11 ರವರೆಗೆ ಬೆಳಗಾವಿಯಲ್ಲಿ ನಡೆಸಲಾಗಿದ್ದು, ವಿಜೇತ ತಂಡಗಳು ಜನವರಿ 20 ರಿಂದ 24 ರವರೆಗೆ ಪಾಂಡಿಚೇರಿಯಲ್ಲಿ ನಡೆದ ವಲಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿವೆ.

**5. ವಿಜ್ಞಾನ ಮತ್ತು ಗಣಿತ ಪ್ರೌಢ ಶಾಲಾ ಶಿಕ್ಷಕರಿಗೆ 10 ದಿನಗಳ ತರಬೇತಿ :**

ರಾಜ್ಯದಲ್ಲಿ ಆಯ್ದ ಒಂದು ಜಿಲ್ಲೆಯ 100 ಜನ ವಿಜ್ಞಾನ ಮತ್ತು ಗಣಿತದ ಪ್ರೌಢ ಶಾಲಾ ಶಿಕ್ಷಕರಿಗೆ ಐ.ಐ.ಎಸ್.ಸಿ. ಸಹಯೋಗದೊಂದಿಗೆ 10 ದಿನಗಳ ಪುನಶ್ಚೇತನ ತರಬೇತಿ ಕಾರ್ಯಕ್ರಮವನ್ನು

ನಡೆಸಲಾಗಿದೆ. ಈ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ಅನುದಾನ ಬಿಡುಗಡೆಯಾಗಿರುವುದಿಲ್ಲ. ಆದಾಗ್ಯೂ ಐ.ಐ.ಎಸ್.ಸಿ.ಯವರೇ ವೆಚ್ಚ ಭರಿಸಿ ದಾವಣಗೆರೆಯಲ್ಲಿ ಫೆಬ್ರುವರಿ ಮಾಹೆಯಲ್ಲಿ ತರಬೇತಿ ನಡೆಸಿರುತ್ತಾರೆ.

**6. ವಿಜ್ಞಾನ ಕೇಂದ್ರಗಳ ನಿರ್ವಹಣೆ :**

224 ವಿಧಾನ ಸಭಾ ಕ್ಷೇತ್ರಗಳಿಗೆ ತಲಾ ಒಂದರಂತೆ ರಾಜ್ಯದಲ್ಲಿ 224 ವಿಜ್ಞಾನ ಕೇಂದ್ರಗಳಿದ್ದು, ಅವುಗಳ ಕಾರ್ಯ ನಿರ್ವಹಣೆಗಾಗಿ ಪ್ರತಿ ಶಾಲೆಗೆ ರೂ.8000/-ಗಳನ್ನು ನೀಡಲಾಗಿದ್ದು, ಸದರಿ ಮೊತ್ತವನ್ನು 10 ಸಿ.ಟಿಇ.ಗಳ ಮೂಲಕ ನೀಡಲಾಗಿದೆ. ಇದರ ವೆಚ್ಚ ರೂ. 17.92 ಲಕ್ಷಗಳಾಗಿರುತ್ತದೆ.

**8. ವಿಷನ್ ಗ್ರೂಪ್ ಕಾರ್ಯಕ್ರಮ:** ಈ ಕಾರ್ಯಕ್ರಮವನ್ನು 2009-10 ನೇ ಸಾಲಿನಿಂದ ಆಯೋಜಿಸಲಾಗಿದ್ದು, ದಾರ್ಶನಿಕ ಸಮೂಹ ಕಾರ್ಯಕ್ರಮದಡಿ 2010-11 ನೇ ಸಾಲಿಗೆ ರೂ. 53.96 ಲಕ್ಷ ಬಿಡುಗಡೆಯಾಗಿರುತ್ತದೆ. ಇದನ್ನು ವಿಜ್ಞಾನದ ವಿವಿಧ ಕಾರ್ಯಕ್ರಮಗಳಿಗೆ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ವಿದ್ಯಾರ್ಥಿ ಹಾಗೂ ಶಿಕ್ಷಕರಿಗೆ ಬಳಸಲಾಗಿದೆ.

**IV) ಶಿಕ್ಷಣ ತಂತ್ರಜ್ಞಾನ ಘಟಕ :** ಶಿಕ್ಷಣದಲ್ಲಿ ತಂತ್ರಜ್ಞಾನ ಅಳವಡಿಸಿಕೊಂಡು ಶಿಕ್ಷಣಕ್ಕೆ ತಾಂತ್ರಿಕತೆಯ ಒತ್ತು ಕೊಟ್ಟು ರೇಡಿಯೊ, ಶಿಕ್ಷಣ ಸಂವಾದ, ಶ್ರವಣ ಮತ್ತು ದೃಶ್ಯ ಮಾಧ್ಯಮ –ಟಿ.ವಿ., ಗಣಕ ಯಂತ್ರ, ಉಪಗ್ರಹ ಆಧಾರಿತ ದೂರ ಸಂಪರ್ಕ ತರಬೇತಿ ಕಾರ್ಯಕ್ರಮ ಇತ್ಯಾದಿಗಳ ಮುಖಾಂತರ ಶಿಕ್ಷಣ ನೀಡಿದಲ್ಲಿ ಶಿಕ್ಷಣ ಇನ್ನೂ ಪರಿಣಾಮಕಾರಿಯಾಗಬಲ್ಲದು ಎಂದು ತಿಳಿಸುವುದೇ ಈ ತಂತ್ರಜ್ಞಾನ ಶಿಕ್ಷಣ ಘಟಕದ ಗುರಿ. ಈ ಘಟಕವು ಕೆಳಗೆ ನೀಡಿರುವ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಡೆಸುತ್ತಿದೆ.

**ಗಣಕ ಮತ್ತು ಗಣಕ ಆಧಾರಿತ ಶಿಕ್ಷಣ:** ರಾಜ್ಯದಲ್ಲಿ ಹಿಂದುಳಿದ ಜಿಲ್ಲೆಗಳ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಇರುವ ಸರ್ಕಾರಿ ಪ್ರೌಢಶಾಲೆಗಳನ್ನು ಆದ್ಯತೆ ಮೇರೆಗೆ ಪರಿಗಣಿಸಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದ್ದು, ಅವುಗಳ ವಿವರ ಈ ರೀತಿ ಇದೆ.

**1) ಮಾಹಿತಿ ಸಿಂಧು ಯೋಜನೆ:**

ಮಾಹಿತಿ ಸಿಂಧು ಯೋಜನೆಯು 2005ನೇ ಡಿಸೆಂಬರ್‌ಗೆ ಮುಕ್ತಾಯಗೊಂಡಿದ್ದು, 2007-08 ರಿಂದ 2009-10 ರವರೆಗೆ 3 ವರ್ಷಗಳ ಅವಧಿಗೆ ಮುಂದುವರೆದ ಮಾಹಿತಿ ಸಿಂಧು ಯೋಜನೆಯಡಿ ಕಂಪ್ಯೂಟರ್ ಶಿಕ್ಷಣ ನೀಡಲಾಗಿದೆ. ನಿರ್ವಹಣಾ ಸಂಸ್ಥೆಯಾದ ಮೆ.ಕಿಯೋನಿಕ್ಸ್ ಸಂಸ್ಥೆಯ ಮೂಲಕ 1009 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ನೀಡಿದ್ದು, 2010-11ನೇ ಸಾಲಿನಲ್ಲಿ ನಿರ್ವಹಣಾ ಸಂಸ್ಥೆಗಳ ಬಾಕಿ ಪಾವತಿಸಲು ರೂ.974.67 ಲಕ್ಷ ಖರ್ಚಾಗಿದೆ.

**2) ಅಮೇರಿಕನ್ ಇಂಡಿಯಾ ಫೌಂಡೇಷನ್:**

ಈ ಸಂಸ್ಥೆಯು ಡಿ.ಎಸ್.ಇ.ಆರ್.ಟಿ.ಯ ಸಹಭಾಗಿತ್ವದೊಂದಿಗೆ ಡಿಜಿಟಲ್ ಈಕ್ವಿಲೈಜರ್ ಕಾರ್ಯಕ್ರಮವನ್ನು ಆಯ್ದ 11 ಜಿಲ್ಲೆಗಳ 200 ಸರ್ಕಾರಿ ಪ್ರೌಢಶಾಲೆಗಳಲ್ಲಿ ಐ.ಟಿ.ಸಿ. ಫೇಸ್-2 ಯೋಜನೆಯಡಿ ಅನುಷ್ಠಾನಗೊಳಿಸಿದೆ. 2010-11 ರಿಂದ 2012-13 ರವರೆಗೆ ಡಿಜಿಟಲ್ ಈಕ್ವಿಲೈಜರ್ ಕಾರ್ಯಕ್ರಮವನ್ನು ಮುಂದುವರೆಸಲಾಗುವುದು.

ಬೆಂಗಳೂರಿನ 10 ಸರ್ಕಾರಿ ಪ್ರೌಢಶಾಲೆಗಳಲ್ಲಿ ಅಮೆರಿಕನ್ ಇಂಡಿಯಾ ಫೌಂಡೇಶನ್ ಸಂಸ್ಥೆಯು 4 ವರ್ಷಗಳಿಂದಲೂ Adobe Youth Voices ಕಾರ್ಯಕ್ರಮದಡಿ ಅನಿಮೇಶನ್ ಕಾರ್ಯಕ್ರಮವನ್ನು ನಡೆಸುತ್ತಾ ಬಂದಿದೆ. 2010–11ನೇ ಸಾಲಿಗೆ ದಿನಾಂಕ 14/12/2010 ಮತ್ತು 15/12/2010 ರಂದು 2 ದಿನಗಳ Script Writing & Stop Motion Animation ಎಂಬ ಕಾರ್ಯಾಗಾರವನ್ನು 10 ಪ್ರೌಢಶಾಲೆಗಳ ಶಿಕ್ಷಕರಿಗೆ ಹಮ್ಮಿಕೊಂಡಿದೆ.

ಅಮೆರಿಕನ್ ಇಂಡಿಯಾ ಫೌಂಡೇಶನ್ ಸಂಸ್ಥೆಯು ಐ.ಸಿ.ಟಿ. ಫೇಸ್–11 ಯೋಜನೆಯಡಿ ಗ್ರಾಮಾಂತರ ಪ್ರದೇಶದಲ್ಲಿ 10 ಸರ್ಕಾರಿ ಪ್ರೌಢಶಾಲೆಗಳನ್ನು Centers for Excellence for Teachers ಎಂಬ ಕೇಂದ್ರಗಳನ್ನು ಸ್ಥಾಪಿಸಲು ಆಯ್ಕೆ ಮಾಡಿಕೊಂಡಿದೆ. ಈ ಕೇಂದ್ರಗಳ ಉದ್ದೇಶ ಶಿಕ್ಷಕರಲ್ಲಿ ಕಂಪ್ಯೂಟರ್ ಮತ್ತು ಇಂಟರ್ ನೆಟ್ ಬಳಕೆಯನ್ನು ತರಗತಿಯಲ್ಲಿ ಪಾಠ ಬೋಧನೆ ಮಾಡುವಾಗ ಗರಿಷ್ಠ ರೀತಿಯಲ್ಲಿ ಬಳಸಿಕೊಳ್ಳುವಂತೆ ಮಾಡುವುದು ಆಗಿದೆ. ಇದಕ್ಕಾಗಿ ಮತ್ತು ಸಂಪನ್ಮೂಲ ಕೇಂದ್ರಗಳನ್ನು ಸೃಷ್ಟಿ ಮಾಡಲು 4 ಹೊಸ ಕಂಪ್ಯೂಟರ್ ಗಳನ್ನು ಹಾಗೂ 1 ತ್ವರಿತ ವೇಗದ ಇಂಟರ್‌ನೆಟ್ ಸಂಪರ್ಕವನ್ನು ಕಲ್ಪಿಸುವಲ್ಲಿ ಸಂಸ್ಥೆಯು ಮುಂದಾಗಿದೆ.

**1) <u>ಐ.ಸಿ.ಟಿ. ಯೋಜನೆ:</u>**

**ಅ) ಐ.ಸಿ.ಟಿ. ಯೋಜನೆ ಫೇಸ್–1 :** ಈ ಯೋಜನೆಯಡಿ 480 ಸರ್ಕಾರಿ ಪ್ರೌಢಶಾಲೆಗಳಲ್ಲಿ ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣವನ್ನು 2007–08ನೇ ಸಾಲಿನ ಜೂನ್ ಮಾಹೆಯಿಂದ ಜಾರಿಗೊಳಿಸಲಾಗಿದೆ. ಈ ಯೋಜನೆಯ ಅವಧಿ ಒಟ್ಟು 5 ವರ್ಷಗಳಾಗಿರುತ್ತದೆ. ಈ ಯೋಜನೆಯನ್ನು ನಿರ್ವಹಣಾ ಸಂಸ್ಥೆಗಳಾದ ಎಡುಕಾಂಪ್ ಮತ್ತು ಎವೆರಾನ ಸಂಸ್ಥೆಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿ ವರ್ಷ ಅಂದಾಜು 1,68,000 ವಿದ್ಯಾರ್ಥಿಗಳು ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣವನ್ನು ಈ ಯೋಜನೆಯಡಿಯಲ್ಲಿ ಪಡೆಯುತ್ತಿದ್ದಾರೆ. 2010–11 ನೇ ಸಾಲಿಗೆ ಕಂಪ್ಯೂಟರ್ ಪಠ್ಯ ಪುಸ್ತಕಗಳನ್ನು ಒದಗಿಸಲಾಗಿದ್ದು, ಫೆಬ್ರವರಿ 2011 ರಲ್ಲಿ ಪರೀಕ್ಷೆಯನ್ನು ನಡೆಸಲಾಗಿದೆ.

**ಆ) ಐ.ಸಿ.ಟಿ. ಯೋಜನೆ ಫೇಸ್–2 :** ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಈ ಯೋಜನೆಯಡಿಯಲ್ಲಿ 1571 ಸರ್ಕಾರಿ ಪ್ರೌಢಶಾಲೆಗಳಲ್ಲಿ ಗಣಕ ಹಾಗೂ ಗಣಕ ಆಧಾರಿತ ಶಿಕ್ಷಣವನ್ನು 2008–09ನೇ ಸಾಲಿನಲ್ಲಿ ಜಾರಿಗೊಳಿಸಲಾಗಿದೆ. ಪ್ರತಿ ಶಾಲೆಗೆ ಘಟಕ ವೆಚ್ಚವಾಗಿ ರೂ.6.70 ಲಕ್ಷ ನಿಗಧಿಯಾಗಿದ್ದು, ಅದರಲ್ಲಿ ರೂ. 5.00 ಲಕ್ಷಗಳನ್ನು ಕೇಂದ್ರ ಸರ್ಕಾರದಿಂದ ಮತ್ತು ರೂ. 1.70 ಲಕ್ಷಗಳನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುವುದು. ಈ ಯೋಜನೆಯ ಒಟ್ಟು ಮೊತ್ತ ರೂ. 105.25 ಕೋಟಿಗಳಾಗಿದ್ದು, ಕೇಂದ್ರ ಸರ್ಕಾರದಿಂದ ರೂ. 31.42 ಕೋಟಿಗಳನ್ನು ಮೊದಲನೇ ಕಂತಾಗಿ ಬಿಡುಗಡೆ ಮಾಡಲಾಗಿದೆ. ರಾಜ್ಯ ಸರ್ಕಾರದಿಂದ ಶಾಲೆಗಳಲ್ಲಿ ಕಂಪ್ಯೂಟರ್ ಕೊಠಡಿ ಪೂರ್ವ ಸಿದ್ಧತೆಗಾಗಿ ರೂ. 11.78 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಪ್ರತಿ ಶಾಲೆಗೆ ರೂ. 75,000 ದಂತೆ ಹಂಚಿಕೆ ಮಾಡಲಾಗಿದೆ. 4,03,550 ವಿದ್ಯಾರ್ಥಿಗಳು ಈ ಯೋಜನೆಯ ಫಲಾನುಭವಿಗಳಾಗಿರುತ್ತಾರೆ. ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಮೆ. ಎಡುಕಾಂ ಸಲ್ಯೂಷನ್ಸ್ ಸಂಸ್ಥೆಯನ್ನು ಟೆಂಡರ್ ಮೂಲಕ ಆಯ್ಕೆ ಮಾಡಲಾಗಿದೆ. 2010–11 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.7.39 ಲಕ್ಷ ಗಳನ್ನು ಖರ್ಚು ಮಾಡಲಾಗಿದೆ.

**ಇ) ಐ.ಸಿ.ಟಿ. ಯೋಜನೆ ಫೇಸ್–3 :** ಈ ಯೋಜನೆಯಡಿಯಲ್ಲಿ 1763 ಸರ್ಕಾರಿ ಪ್ರೌಢಶಾಲೆ ಹಾಗೂ 2633 ಸರ್ಕಾರಿ ಅನುದಾನಿತ ಪ್ರೌಢಶಾಲೆಗಳನ್ನು ಆಯ್ಕೆ ಮಾಡಲಾಗಿದೆ. 2009–10 ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅಗತ್ಯ ಕ್ರಮ ಕೈಗೊಂಡಿದ್ದು, 2010–11ನೇ ಸಾಲಿನಲ್ಲಿ ಇದನ್ನು ಶಾಲೆಗಳಲ್ಲಿ ಜಾರಿಗೊಳಿಸಲಾಗಿದೆ.

ಈ ಯೋಜನೆಗಳಿಗೆ ಸರ್ಕಾರದಿಂದ ಒಟ್ಟು ರೂ.90.00 ಕೋಟಿಗಳ ಅನುದಾನ ಬಿಡುಗಡೆಯಾಗಿದೆ. 1763 ಸರ್ಕಾರಿ ಪ್ರೌಢಶಾಲೆಗಳಿಗೆ ಕೊಠಡಿ ಪೂರ್ವ ಸಿದ್ಧತೆಗಾಗಿ ಅನುದಾನ ಇಡುಗಡೆ ಮಾಡಲಾಗಿದೆ. ಇದೂ ಅಲ್ಲದೆ 1763 ಸರ್ಕಾರಿ ಪ್ರೌಢಶಾಲೆ ಹಾಗೂ 2633 ಅನುದಾನಿತ ಪ್ರೌಢಶಾಲೆಗಳಿಗೆ ಯು.ಪಿ.ಎಸ್., ಪ್ರಿಂಟರ್ ಹಾಗೂ ಮಲ್ಟಿ ಫಂಕ್ಷನಲ್ ಡಿವೈಸ್ ಪ್ರಿಂಟರ್‌ಗಳನ್ನು ಸರಬರಾಜು ಮಾಡಿದ್ದು ಉಳಿದ ಉಪಕರಣಗಳನ್ನು ಸರಬರಾಜು ಮಾಡಲು ಕ್ರಮ ವಹಿಸಲಾಗಿದೆ. 2011–12ನೇ ಸಾಲಿನಿಂದ ಈ ಯೋಜನೆ ಅನುಷ್ಠಾನಗೊಳ್ಳಲಿದೆ.

**2) <u>ಎಜುಸ್ಯಾಟ್ ಕಾರ್ಯಕ್ರಮ :</u>**

ಎಜುಸ್ಯಾಟ್ ಕಾರ್ಯಕ್ರಮಗಳ ಪ್ರಸಾರಕ್ಕಾಗಿ ಡಿ.ಎಸ್.ಇ.ಆರ್.ಟಿ. ಯಲ್ಲಿ ಸ್ಟುಡಿಯೋ ಮತ್ತು ಹಬ್‌ಗಳನ್ನು ಸ್ಥಾಪಿಸಲಾಗಿದ್ದು, ಚಾಮರಾಜನಗರ, ಗುಲ್ಬರ್ಗ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿನ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಇಸ್ರೊ ನೆರವಿನಿಂದ ಸ್ವೀಕೃತಿ ಕೇಂದ್ರಗಳನ್ನು ತೆರಯಲಾಗಿದೆ. ಒಟ್ಟು 458 ಚಿತ್ರಗಳನ್ನು ಪ್ರಸಾರಕ್ಕಾಗಿ ತಯಾರಿಸಲಾಗಿದೆ. ಚಾಮರಾಜನಗರ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿನ ಎಜುಸ್ಯಾಟ್ ಶಾಲೆಗಳ ಕಂಪ್ಯೂಟರ್ ಉಪಕರಣಗಳ ರಿಪೇರಿಗಾಗಿ ಕ್ರಮ ಕೈಗೊಂಡಿದ್ದು, ಈ ಸಂಬಂಧ ಸರ್ಕಾರದಿಂದ ರೂ.200.00 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ.

**3) <u>ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮ:</u>**

ಶೈಕ್ಷಣಿಕ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮಗಳನ್ನು ಡಿ.ಎಸ್.ಇ.ಆರ್.ಟಿ.ಯ ಸ್ಟುಡಿಯೋ ಮೂಲಕ ಹಮ್ಮಿಕೊಳ್ಳಲಾಗಿದೆ. ಶಾಲಾ ಶಿಕ್ಷಕರುಗಳಿಗೆ, ಸಿ.ಆರ್.ಸಿ., ಬಿ.ಆರ್.ಸಿ. ಗಳಿಗೆ ಹಾಗೂ ರಾಜ್ಯದ ವಿವಿಧ ಹಂತಗಳ ಅಧಿಕಾರಿಗಳಿಗೆ ತರಬೇತಿ ನೀಡಿದ್ದು, ಸಭೆ, ಸಂವಾದ ಇತ್ಯಾದಿಗಳನ್ನು ನೇರವಾಗಿ ಟೆಲಿಕಾನ್ಫರೆನ್ಸಿಂಗ್ ಮೂಲಕ ನಡೆಸಲಾಗುತ್ತಿದೆ. ರಾಜ್ಯದ 202 ಬಿ.ಆರ್.ಸಿ.ಗಳಲ್ಲಿ ಮತ್ತು ಎಲ್ಲಾ ಡಯಟ್‌ಗಳಲ್ಲಿ ಸ್ವೀಕೃತಿ ಕೇಂದ್ರಗಳನ್ನು ಅಳವಡಿಸಲಾಗಿದೆ. ಹೊಸದಾಗಿ ಜಿಲ್ಲಾ ಕೇಂದ್ರಗಳಲ್ಲಿ ಅಧಿಕಾರಿಗಳೊಂದಿಗೆ ದ್ವಿಮುಖ ಅಂತರ್‌ಕ್ರಿಯೆಗೆ ಅನುಕೂಲವಾಗುವಂತೆ ಎಸ್.ಐ.ಟಿ. ಸ್ಟುಡಿಯೋವನ್ನು ಡಿ.ಎಸ್.ಇ.ಆರ್.ಟಿ. ಯಲ್ಲಿ ಸಜ್ಜುಗೊಳಿಸಿ ಡಯಟ್‌ಗಳಲ್ಲಿ ಸ್ವೀಕೃತಿ ಕೇಂದ್ರಗಳನ್ನು ಎಸ್.ಎಸ್.ಎ. ಅನುದಾನದಲ್ಲಿ ಸಿದ್ಧಪಡಿಸಿದೆ.

**4) <u>ರೇಡಿಯೋ ಕಾರ್ಯಕ್ರಮ:</u>**

2010–11ನೇ ಸಾಲಿನಲ್ಲಿ ರಾಜ್ಯದ 13 ಆಕಾಶವಾಣಿ ಕೇಂದ್ರಗಳಿಂದ ಪಠ್ಯಾಧಾರಿತ ರೇಡಿಯೋ ಕಾರ್ಯಕ್ರಮಗಳನ್ನು ತರಗತಿ 1 ರಿಂದ 8 ರವರೆಗೆ ಪ್ರಸಾರ ಮಾಡಲಾಗಿದ್ದು,. ಈ ಸಾಲಿನಲ್ಲಿ ಒಟ್ಟು 406 ರೇಡಿಯೋ ಪಾಠಗಳನ್ನು ಪ್ರಸಾರ ಮಾಡಲಾಗಿದೆ. ಅಲ್ಲದೆ, 3ನೇ ತರಗತಿ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಭಾಷೆಯ 20 ಹೊಸ ಪಠ್ಯಗಳನ್ನು ಇಡಿಸಿಯು ಸಿದ್ಧಪಡಿಸಿದ್ದು, ಸರ್ವಶಿಕ್ಷಣ ಅಭಿಯಾನದ

ಅನುದಾನದಿಂದ ವೆಚ್ಚ ಭರಿಸಲಾಗಿದೆ. ರೂ. 75.00 ಲಕ್ಷಗಳ ಪ್ರಸಾರ ವೆಚ್ಚವನ್ನು ಆಕಾಶವಾಣಿಗೆ ಪಾವತಿಸಲಾಗಿದೆ.

## V) ರಾಜ್ಯ ಶೈಕ್ಷಣಿಕ ಮೌಲ್ಯಮಾಪನ ಮತ್ತು ಶೈಕ್ಷಣಿಕ ವೃತ್ತಿ ಮಾರ್ಗದರ್ಶನ :

**ಅ) ರಾಜ್ಯ ಶೈಕ್ಷಣಿಕ ಮೌಲ್ಯಮಾಪನ :** ಇದರ ಮುಖ್ಯ ಕಾರ್ಯಕ್ರಮಗಳೆಂದರೆ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವಂತೆ ಮಾಡುವುದು, ಶಿಕ್ಷಕರಿಗೆ ವಿಷಯ ಕಾರ್ಯಾಗಾರ ತರಬೇತಿ ಸಂಚಿಕೆಗಳ ತಯಾರಿಕೆ, ಸೆಮಿಸ್ಟರ್ ಪದ್ಧತಿಯ ಮಾರ್ಗದರ್ಶನ ಮುಂತಾದವುಗಳನ್ನೊಳಗೊಂಡಿದೆ. 2010-11 ನೇ ಸಾಲಿನಲ್ಲಿ ಈ ಕೆಳಗಿನ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

- ಎನ್.ಸಿ.ಇ.ಆರ್.ಟಿ.ಯ ಸಹಯೋಗದೊಂದಿಗೆ ಸಾಧನಾ ಸಮೀಕ್ಷೆಯನ್ನು (TAS—Terminal Achievement Survey) 5 ನೇ ತರಗತಿಗೆ ರಾಜ್ಯದ ಆಯ್ದ 11 ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಒಟ್ಟು 259 ಶಾಲೆಗಳಲ್ಲಿ 5000 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ನಡೆಸಲಾಗಿದ್ದು, ಮಕ್ಕಳ ಕಲಿಕಾ ಮಟ್ಟವನ್ನು ರಾಷ್ಟ್ರ ಮಟ್ಟದಲ್ಲಿ ಪತ್ತೆ ಹಚ್ಚಲು ಈ ಸಮೀಕ್ಷೆಯು ಸಹಾಯಕವಾಗಿದೆ. ಭಾಷೆ, ಗಣಿತ, ಮತ್ತು ಪರಿಸರ ಅಧ್ಯಯನ ವಿಷಯಗಳಲ್ಲಿ ಪರೀಕ್ಷೆಯನ್ನು ನಡೆಸಲಾಗಿದ್ದು, ಕ್ರೋಢೀಕರಿಸಿದ ಪರೀಕ್ಷಾ ಸಾಮಗ್ರಿಗಳನ್ನು ಮತ್ತು ದತ್ತಾಂಶಗಳನ್ನು ಮುಂದಿನ ಕ್ರಮಕ್ಕಾಗಿ ಎನ್.ಸಿ.ಇ.ಆರ್.ಟಿ.ಗೆ ಒಪ್ಪಿಸಲಾಗಿದೆ.
- 2010-11 ರ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪ್ರೌಢ ಶಾಲೆಗಳಿಗೆ ವಾರ್ಷಿಕ ಪರೀಕ್ಷಾ ಪದ್ಧತಿಯನ್ನು ಅನುಷ್ಠಾನಗೊಳಿಸಿರುವ ಹಿನ್ನೆಲೆಯಲ್ಲಿ ಶಿಕ್ಷಕರಿಗೆ ಮಾರ್ಗಸೂಚಿ ಸಾಹಿತ್ಯವನ್ನು ಸಿದ್ಧಪಡಿಸಿ ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳಿಗೆ ವಿತರಿಸಲಾಗಿದೆ.
- ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯ ಕೋರಿಕೆಯಂತೆ ಸಾಮರ್ಥ್ಯಾಧಾರಿತ ಪ್ರಶ್ನೆ ಕೋಠಿಯನ್ನು ತರಗತಿ 5 ರಿಂದ 7 ಕ್ಕೆ ಪ್ರಥಮ ಭಾಷೆ ಹಾಗೂ ಕೋರ್ ವಿಷಯ ಕನ್ನಡ ಮಾಧ್ಯಮದಲ್ಲಿ ಮಾತ್ರ ಸಿದ್ಧಪಡಿಸುವ ಕಾರ್ಯಾಗಾರವನ್ನು ನಡೆಸಲಾಗಿದೆ.
- ಶಿಕ್ಷಕರ ಮೌಲ್ಯಮಾಪನ ಕೈಪಿಡಿಯ ತಯಾರಿಕೆ ಮತ್ತು ಮುದ್ರಣ ಕಾರ್ಯಗಳನ್ನು ಪೂರ್ಣಗೊಳಿಸಿದ್ದು, ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ನೀಡಲಾಗಿದೆ.
- ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಶಿಕ್ಷಕರಿಗೆ DIET ಮತ್ತು CTE ಮುಖಾಂತರ ಮೌಲ್ಯಮಾಪನ ತರಬೇತಿಯನ್ನು ಹಂತ ಹಂತವಾಗಿ ನೀಡಲಾಗಿದೆ.
- 3 ನೇ ಮತ್ತು 8ನೇ ತರಗತಿಗಳಿಗೆ ಸಾಧನಾ ಸಮೀಕ್ಷೆ (TAS) ಕಾರ್ಯ ಹಮ್ಮಿಕೊಳ್ಳುವ ಹಿನ್ನೆಲೆಯಲ್ಲಿ ಮೊದಲ ಹಂತದ ತರಬೇತಿಯನ್ನು ನವಂಬರ್ 2010 ರಲ್ಲಿ ಎನ್.ಸಿ.ಇ.ಆರ್.ಟಿ.ಯಲ್ಲಿ ಆಯೋಜಿಸಲಾಗಿತ್ತು. ಇದರಲ್ಲಿ ಚಿತ್ರದುರ್ಗ ಜಿಲ್ಲೆಯ ಡಯಟ್ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಡಯಟ್‌ಗಳ ಜಿಲ್ಲಾ ಸಂಯೋಜಕರು ಹಾಜರಾಗಿರುತ್ತಾರೆ. 10 ದಿನಗಳ ಅವಧಿಯ ಮುಂದಿನ ಹಂತದ ತರಬೇತಿಯನ್ನು ಎನ್.ಸಿ.ಇ.ಆರ್.ಟಿ. ಯಲ್ಲಿ ಫೆಬ್ರುವರಿ 21 ರಿಂದ ನಡೆಸಲಾಗಿದೆ. 2011 ರ ಮಾರ್ಚ್‌ನಲ್ಲಿ 3 ಮತ್ತು 8 ನೇ ತರಗತಿಗಳ ಸಾಧನಾ ಸಮೀಕ್ಷೆಯನ್ನು (TAS) ಹಮ್ಮಿಕೊಳ್ಳಲಾಗಿದೆ.

**(ಆ) ಶೈಕ್ಷಣಿಕ ವೃತ್ತಿ ಮಾರ್ಗದರ್ಶನ :** ಮುಖ್ಯವಾಗಿ ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ವಿಭಾಗದಲ್ಲಿ ಕಾರ್ಯಕ್ರಮಗಳು ಕೇಂದ್ರ ಆಧಾರಿತವಾಗಿದ್ದು, ವೆಚ್ಚವನ್ನು ಕೇಂದ್ರವೇ ಭರಿಸುತ್ತದೆ.

2010–11 ನೇ ಸಾಲಿನಲ್ಲಿ ಸಿ.ಸಿ.ಆರ್.ಟಿ. ನವದೆಹಲಿ ಇವರು ಆಯೋಜಿಸಿರುವ ತರಬೇತಿಗಳಿಗೆ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರರನ್ನು ನಿಯೋಜನೆ ಮಾಡಲಾಗಿದೆ. ಪ್ರತಿ ಮಾಹೆಯೂ 4 ತರಬೇತಿಗಳಲ್ಲಿ ಒಂದು ತರಬೇತಿಗೆ 10 ಜನರಂತೆ ವರ್ಷಕ್ಕೆ 480 ಜನ ತರಬೇತಿಯ ಪ್ರಯೋಜನ ಪಡೆದಿದ್ದಾರೆ. ಮೌಲ್ಯ ಶಿಕ್ಷಣ ಮತ್ತು ಯೋಗ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಬಂದಿರುವ ಪ್ರಸ್ತಾವನೆಗಳನ್ನು ಶಿಫಾರಸ್ಸು ಮಾಡಿ ಕಳುಹಿಸಲಾಗುತ್ತಿದೆ. ತೃತೀಯ ಭಾಷೆ ಉರ್ದುವಿಗೆ ಸಂಬಂಧಿಸಿದಂತೆ ಪಠ್ಯ ವಸ್ತು ಮತ್ತು ಪಠ್ಯ ಕ್ರಮವನ್ನು ಸಿದ್ಧಪಡಿಸಲಾಗಿದೆ.

**(ಇ) ದೈಹಿಕ ಶಿಕ್ಷಣ ಘಟಕ :** ಈ ಘಟಕದ ವತಿಯಿಂದ 6 ರಿಂದ 9 ನೇ ತರಗತಿಯವರೆಗಿನ ದೈಹಿಕ ಶಿಕ್ಷಣ ಶಿಕ್ಷಕರ ಕೈಪಿಡಿ, ಮೌಲ್ಯ ಮಾಪನ ಸಂಚಿ ರಚನೆ ಹಾಗೂ ಪಠ್ಯ ಪುಸ್ತಕಗಳ ಭಾಷಾಂತರ ಕೆಲಸಗಳನ್ನು ಮುಖ್ಯವಾಗಿ ನಿರ್ವಹಿಸಲಾಗಿದೆ.

**ಸಾಧಿಸಿರುವ ಪ್ರಗತಿ:**

1) ಮೌಲ್ಯ ಮಾಪನ ಸಂಚಿ ರಚನಾ ಕಾರ್ಯವನ್ನು ಮುಗಿಸಿ ಡಿ.ಟಿ.ಪಿ. ಕೆಲಸವನ್ನೂ ಸಹ ಅಂತಿಮಗೊಳಿಸಲಾಗಿದೆ. ಸದರಿ ಮೌಲ್ಯಮಾಪನ ಸಂಚಿಯನ್ನು 6 ಭಾಷೆಗಳಿಗೆ (ತಮಿಳು, ತೆಲುಗು, ಮರಾಠಿ, ಇಂಗ್ಲೀಷ್, ಹಿಂದಿ ಹಾಗೂ ಉರ್ದು) ಅನುವಾದ ಮಾಡಲಾಗಿದೆ.

2) 6 ನೇ ತರಗತಿಯಿಂದ 9 ನೇ ತರಗತಿಯವರೆಗಿನ ಕನ್ನಡ ಮಾಧ್ಯಮದಲ್ಲಿರುವ ದೈಹಿಕ ಶಿಕ್ಷಣ ಪಠ್ಯ ಪುಸ್ತಕಗಳನ್ನು ಮೇಲ್ಕಂಡ 6 ಭಾಷೆಗಳಿಗೆ ಅನುವಾದ ಮಾಡಲಾಗಿದ್ದು, ಡಿ.ಟಿ.ಪಿ. ಕಾರ್ಯವೂ ಅಂತಿಮಗೊಂಡಿದೆ.

3) ದೈಹಿಕ ಶಿಕ್ಷಣ ಶಿಕ್ಷಕರ ಕೈಪಿಡಿ ರಚನಾ ಕಾರ್ಯ ಪೂರ್ಣಗೊಂಡಿದೆ.

2010–11 ನೇ ಸಾಲಿನಲ್ಲಿ ದೈಹಿಕ ಶಿಕ್ಷಣ ಘಟಕದ ವತಿಯಿಂದ ಒಟ್ಟು ರೂ.8,44,763/–ಗಳನ್ನು ವೆಚ್ಚ ಮಾಡಲಾಗಿದೆ.

## VI) ರಾಷ್ಟ್ರೀಯ ಪ್ರತಿಭಾನ್ವೇಷಣಾ ಪರೀಕ್ಷೆ (NTSE) :

NTSE ಪರೀಕ್ಷೆಯು 3 ಹಂತದ್ದಾಗಿದ್ದು, ಮೊದಲನೇ ಹಂತದ ರಾಜ್ಯ ಮಟ್ಟದ ಪರೀಕ್ಷೆಯನ್ನು DSERT ವತಿಯಿಂದ ನಡೆಸಲಾಗುತ್ತದೆ. 2 ಮತ್ತು 3 ನೇ ಹಂತದ ಪರೀಕ್ಷೆಯನ್ನು NCERT ಯು ನಡೆಸುತ್ತದೆ. ಈ ಪರೀಕ್ಷೆಯ ಮುಖ್ಯ ಉದ್ದೇಶವು ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪೋಷಿಸುವುದು ಹಾಗೂ ಅವರ ಮುಂದಿನ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿವೇತನ ನೀಡುವ ಮೂಲಕ ಅವರಲ್ಲಿರುವ ಪ್ರತಿಭೆಯನ್ನು ಅನಾವರಣಗೊಳಿಸುವುದು. ರಾಜ್ಯದಲ್ಲಿರುವ ಸರ್ಕಾರಿ, ಅನುದಾನಿತ, ಅನುದಾನರಹಿತ ರಾಜ್ಯ ಹಾಗೂ ಕೇಂದ್ರ ಪಠ್ಯ ವಸ್ತು ಅನುಸರಿಸುತ್ತಿರುವ ಶಾಲೆಗಳಲ್ಲಿ 8 ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಮಾತ್ರ ಈ ಪರೀಕ್ಷೆಯನ್ನು ತೆಗೆದುಕೊಳ್ಳಬಹುದಾಗಿರುತ್ತದೆ. 2010–11 ನೇ ಸಾಲಿನ ಪ್ರಥಮ ಹಂತದ ಪರೀಕ್ಷಯು 198 ಕೇಂದ್ರಗಳಲ್ಲಿ ನವಂಬರ್ 21 ರಂದು ನಡೆಯಿತು. ಇದರಲ್ಲಿ 48,000 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆದಿದ್ದು, ಅದರಲ್ಲಿ ಆಯ್ಕೆಯಾದ 242 ವಿದ್ಯಾರ್ಥಿಗಳಿಗೆ ರಾಷ್ಟ್ರ ಮಟ್ಟದಲ್ಲಿ ಮೇ 8, 2011 ರಲ್ಲಿ ಪರೀಕ್ಷೆಯು ನಡೆಸಲ್ಪಡಲಿದೆ. ರಾಷ್ಟ್ಟ ಮಟ್ಟದ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಅವರ ಕಲಿಕೆಯ ಕೊನೆಯ ಹಂತದವರೆಗೆ ರೂ. 500/–ರಂತೆ (MHRD ಪುರಸ್ಕೃತ) ಹಾಗೂ ರಾಜ್ಯ ಮಟ್ಟದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಎರಡು ವರ್ಷಗಳವರೆಗೆ ರೂ. 200/– ರಂತೆ (SWF & TBF ಪುರಸ್ಕೃತ) ಪ್ರತಿ ಮಾಹೆಯೂ ವಿದ್ಯಾರ್ಥಿವೇತನ ನೀಡಿ ಪ್ರೋತ್ಸಾಹಿಸಲಾಗುವುದು.

ಎನ್.ಟಿ.ಎಸ್.ಇ. ಯ ಇದುವರೆಗಿನ 5 ವರ್ಷಗಳ ಅಂಕಿ ಅಂಶಗಳು ಈ ರೀತಿ ಇರುತ್ತವೆ :

| ಕ್ರ.ಸಂ. | ಪರೀಕ್ಷೆ ನಡೆದ ವರ್ಷ | ಪರೀಕ್ಷೆ ಬರೆದ ವಿದ್ಯಾರ್ಥಿಗಳ ಸಂಖ್ಯೆ | ರಾಜ್ಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳ ಸಂಖ್ಯೆ | ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|
| **1** | **2** | **3** | **4** | **5** |
| 1 | 2005–06 | 43,200 | 295 | 134 |
| 2 | 2006–07 | 62,595 | 530 | 173 |
| 3 | 2007–08 | 53,447 | 520 | 158 |
| 4 | 2008–09 | 20,010 | 231 | 104 |
| 5 | 2009–10 | 41,891 | 234 | 80 |
| 6 | 2010–11 | 48,000 | 242 | --- |

## VII ) ನ್ಯಾಶನಲ್ ಮೀನ್ಸ್-ಕಮ್-ಮೆರಿಟ್ ವಿದ್ಯಾರ್ಥಿವೇತನ ಪರೀಕ್ಷೆ(NMMS) :

ರಾಜ್ಯದ ಸರ್ಕಾರಿ, ಅನುದಾನಿತ, ಹಾಗೂ ಸ್ಥಳೀಯ ಸಂಸ್ಥೆಗಳ ಪ್ರೌಢ ಶಾಲೆಗಳಲ್ಲಿ 8 ನೇ ತರಗತಿಯಲ್ಲಿ ಓದುತ್ತಿರುವ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ವತಿಯಿಂದ ನಡೆಸುವ ಪರೀಕ್ಷೆ ಇದಾಗಿದೆ. ಇದು ರಾಜ್ಯ ಮಟ್ಟದ ಒಂದು ಹಂತದ ಪರೀಕ್ಷೆಯಾಗಿದ್ದು, DSERT ಈ ಪರೀಕ್ಷೆಯನ್ನು ನಡೆಸುತ್ತದೆ. ಈ ಯೋಜನೆಗೆ ಅರ್ಹರಾಗಲು ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ರೂ.1,50,000/-ಗಳ ಮಿತಿಯೊಳಗಿರಬೇಕು ಹಾಗೂ NTSE ಮಾದರಿಯಲ್ಲಿ ಜರುಗುವ ರಾಜ್ಯ ಮಟ್ಟದ ಪರೀಕ್ಷೆಯಲ್ಲಿ ಭಾಗವಹಿಸಿ ಅರ್ಹತೆಯನ್ನು ಗಳಿಸಬೇಕು. ಈ ಯೋಜನೆಯ ಮುಖ್ಯ ಉದ್ದೇಶ 8ನೇ ತರಗತಿಯ ನಂತರ ಶಾಲೆ ಬಿಡುವ ವಿದ್ಯಾರ್ಥಿಗಳ ಸಂಖ್ಯೆಯನ್ನು ತಡೆಯುವುದು ಹಾಗೂ 8 ರಿಂದ 12 ನೇ ತರಗತಿಯವರೆಗೆ ನಿರಂತರ ವ್ಯಾಸಂಗ ಮುಂದುವರಿಯುವಂತೆ ಮಾಡುವುದಾಗಿದೆ. ಈ ಪರೀಕ್ಷೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಮಾಸಿಕ ರೂ. 500/- ರಂತೆ 4 ವರ್ಷಗಳ ಕಾಲ ವಿದ್ಯಾರ್ಥಿವೇತನ ನೀಡಲಾಗುತ್ತದೆ. ಸದರಿ ಯೋಜನೆ 2007-08 ರಿಂದ ಜಾರಿಯಾಗಿದ್ದು, ಇತ್ತೀಚಿನ ವರ್ಷಗಳ ಅಂಕಿ ಅಂಶಗಳು ಕೆಳಗಿನಂತಿವೆ.

| ಕ್ರ.ಸಂ. | ಪರೀಕ್ಷೆ ನಡೆದ ವರ್ಷ | ಪರೀಕ್ಷೆ ಬರೆದ ವಿದ್ಯಾರ್ಥಿಗಳ ಸಂಖ್ಯೆ | ವಿದ್ಯಾರ್ಥಿವೇತನಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| 1 | 2 | 3 | 4 |
| 1 | 2008–09 (9ನೇ ತರಗತಿ) | 12,029 | 1639 |
| 2 | 2008–09 (8ನೇ ತರಗತಿ) | 11,492 | 1347 |
| 3 | 2009–10 (8ನೇ ತರಗತಿ) | 33,689 | 2444 |
| 4 | 2010–11 (8ನೇ ತರಗತಿ) | 60,000 | 3387 |

## VIII ) ರಾಷ್ಟ್ರೀಯ ಜನಸಂಖ್ಯಾ ಶಿಕ್ಷಣ ಯೋಜನೆ (ಎನ್.ಪಿ.ಇ.ಪಿ.) :

ಈ ಯೋಜನೆಯಡಿಯಲ್ಲಿ ದೆಹಲಿಯ ಎನ್.ಸಿ.ಇ.ಆರ್.ಟಿ.ಯಿಂದ 2010-11 ನೇ ಸಾಲಿಗೆ ಅನುಮೋದಿತ ಕ್ರಿಯಾ ಯೋಜನೆಯಲ್ಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ರೂ. 9 ಲಕ್ಷ ಬಿಡುಗಡೆಯಾಗಿರುತ್ತದೆ. ಅನುಮೋದಿತ ಕ್ರಿಯಾ ಯೋಜನೆಯ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ.

1) ಜನಸಂಖ್ಯಾ ಶಿಕ್ಷಣಕ್ಕೆ ಮತ್ತು ಹದಿ ಹರೆಯ ಶಿಕ್ಷಣಕ್ಕೆ ಸಂಬಂಧಿಸಿದಂತೆ 1 ದಿನದ ಮತ್ತು 3 ದಿನಗಳ ತರಬೇತಿಯ ಮನವರಿಕೆ ಕಾರ್ಯಕ್ರಮಗಳನ್ನು ಆಯ್ದ 6 ಜಿಲ್ಲೆಗಳಲ್ಲಿ 150 ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ನೀಡಲು ರೂ. 1 ಲಕ್ಷ ವೆಚ್ಚ ಮಾಡಲಾಗಿದೆ.
2) ಹದಿ ಹರೆಯ ವಯಸ್ಸಿನ ವಿದ್ಯಾರ್ಥಿಗಳು ದುಶ್ಚಟಗಳಿಗೆ ಒಳಪಡದೆ ಹಾಗೂ ಅಂಥವುಗಳಿಂದ ಹೊರಬಂದು ಬೌದ್ಧಿಕ, ಭಾವನಾತ್ಮಕ ಹಾಗೂ ಮಾನಸಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ದಿಕ್ಕಿನಲ್ಲಿ ಶಾಲಾ ಮಟ್ಟ, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟಗಳಲ್ಲಿ ಪಾತ್ರಾಭಿನಯ ಸ್ಪರ್ಧೆಗಳನ್ನು ನಡೆಸಲು ರೂ.6.6 ಲಕ್ಷ ಬಿಡುಗಡೆಯಾಗಿದ್ದು, ರೂ.5,89,268 ಗಳನ್ನು ಖರ್ಚು ಮಾಡಲಾಗಿದೆ. ಶಾಲಾ ಮಟ್ಟ, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದ ಪಾತ್ರಾಭಿನಯ ಸ್ಪರ್ಧೆಗಳನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಗಿದ್ದು, ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿದ ತಂಡಗಳಿಗೆ ನವಂಬರ್ 4 ರಂದು ಆರ್. ವಿ. ಟೀಚರ್ಸ್ ಕಾಲೇಜ್, ಜಯನಗರ, ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ನಾವಲ್ಲಿ ಸರ್ಕಾರಿ ಪ್ರೌಢ ಶಾಲೆ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು, ಕೇರಳದ ತಿರುವನಂತಪುರಂನಲ್ಲಿ ನಡೆದ ವಲಯ ಮಟ್ಟದ ಪಾತ್ರಾಭಿನಯ ಸ್ಪರ್ಧೆಯಲ್ಲಿ ಭಾಗವಹಿಸಿರುತ್ತದೆ.
3) ವಿಶ್ವ ಏಡ್ಸ್ ದಿನಾಚರಣೆಯ ನಿಮಿತ್ತ ಡಿಸೆಂಬರ್ ತಿಂಗಳಿನಲ್ಲಿ ಆಯ್ದ 10 ಜಿಲ್ಲೆಗಳ ಶಾಲೆಗಳಲ್ಲಿ ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಇವುಗಳ ಮುಂದಿನ ಹಂತದ ಸ್ಪರ್ಧೆಗಳನ್ನು ನಡೆಸಲು ಆಯ್ದ 10 ಜಿಲ್ಲೆಗಳಿಗೆ ತಲಾ ರೂ. 10,000 ರಂತೆ ಉಪ ನಿರ್ದೇಶಕರಿಗೆ ಒಟ್ಟು ರೂ. 1 ಲಕ್ಷ ಬಿಡುಗಡೆ ಮಾಡಲಾಗಿದೆ.

## IX) ಶಿಕ್ಷಕರ ಶಿಕ್ಷಣ :

ಕರ್ನಾಟಕ ರಾಜ್ಯದಲ್ಲಿರುವ ಶಿಕ್ಷಕರ ಶಿಕ್ಷಣ ಸಂಸ್ಥೆಗಳು ಈ ಕೆಳಗಿನಂತಿವೆ:

| ಸಂಸ್ಥೆಗಳು | ಸರ್ಕಾರಿ | ಅನುದಾನಿತ | ಅನುದಾನರಹಿತ | ಒಟ್ಟು |
|---|---|---|---|---|
| ಡಿ.ಎಡ್. ಕಾಲೇಜ್ | 30 ಡಯಟ್‌ಗಳು<br>14 ಟಿ.ಟಿ.ಐ.ಗಳು } 44 | 40 | 884 | 968 |
| ಬಿ.ಎಡ್. ಕಾಲೇಜ್ | 6 ಸಿ.ಟಿ.ಇ.ಗಳು<br>1 (ಸರ್ಕಾರಿ ಬಿ.ಎಡ್. ಕಾಲೇಜ್, ಚಿಕ್ಕ ಬಳ್ಳಾಪುರ)<br>2 ( ಧಾರವಾಡ ಮತ್ತು ಬಿಜಾಪುರ ವಿಶ್ವವಿದ್ಯಾಲಯಗಳಿಗೆ ಸೇರಿವೆ.) | 44 | 375 | 428 |

ಶಿಕ್ಷಕರ ಶಿಕ್ಷಣ ವಿಭಾಗವು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ, ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳ ಮತ್ತು ಶಿಕ್ಷಕರ ಶಿಕ್ಷಣ ಮಹಾ ವಿದ್ಯಾಲಯಗಳ ಆಡಳಿತ, ಅನುದಾನ ಹಂಚಿಕೆ ಅಲ್ಲದೆ ಶೈಕ್ಷಣಿಕ ಗುಣಮಟ್ಟ ಸುಧಾರಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಿರ್ವಹಿಸುತ್ತಿದೆ.

1. ಸೇವಾ ಪೂರ್ವ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮ
2. ಡಯಟ್, ಸಿಟಿ.ಇ. ಗಳ ಮೂಲಕ ಸೇವಾನಿರತ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮ
3. ಸರ್ಕಾರಿ ಶಿಕ್ಷಕರ ಶಿಕ್ಷಣ ತರಬೇತಿ ಸಂಸ್ಥೆಗಳಿಗೆ (14 ಜಿ.ಟಿ.ಟಿ.ಐ. ಗಳಿಗೆ) ಮುಂದುವರೆದ ಕಾರ್ಯಕ್ರಮಗಳಡಿ ಕಟ್ಟಡ ರಿಪೇರಿ/ಮೂಲಭೂತ ಸೌಕರ್ಯಕ್ಕಾಗಿ ರೂ. 70 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು ಉದ್ದೇಶಿತ ಕಾರ್ಯಗಳಿಗೆ ಸೂಕ್ತ ರೀತಿಯಲ್ಲಿ ವ್ಯಯಿಸಲಾಗಿದೆ.

## X) ಡಯಟ್ ಶಾಖೆ :

2010–11 ನೇ ಸಾಲಿನಲ್ಲಿ ರಾಜ್ಯದ ಡಯಟ್‌ಗಳ ಮೂಲಕ ಸುಮಾರು 48,000 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕನ್ನಡ, ಆಂಗ್ಲ, ಗಣಿತ, ವಿಜ್ಞಾನ, ಹಿಂದಿ, ಭೂಗೋಳ ವಿಷಯಗಳಲ್ಲಿ ವಿಷಯ ಸಂಪದೀಕರಣ ತರಬೇತಿ, ಚೈತನ್ಯ ಪ್ರಾಜೆಕ್ಟ್, ಸಾಮಾಜಿಕ ಉಪಯುಕ್ತತೆಯಂಥ ವಿಷಯಗಳಲ್ಲಿ ತರಬೇತಿ ನೀಡಲಾಗಿದ್ದು, ಇದಕ್ಕೆ ತಗುಲಿರುವ ವೆಚ್ಚ ರೂ. 45,34,000 ಗಳಾಗಿರುತ್ತವೆ.

ರಾಜ್ಯದಲ್ಲಿರುವ ಸಿ.ಟಿ.ಇ.ಗಳ ಮೂಲಕ 2010–11 ರ ಸಾಲಿನಲ್ಲಿ ಸುಮಾರು 10,500 ಪ್ರೌಢ ಶಾಲಾ ಶಿಕ್ಷಕರಿಗೆ ಕನ್ನಡ, ಇಂಗ್ಲೀಷ್, ಹಿಂದಿ, ಗಣಿತ, ಸಮಾಜ ವಿಜ್ಞಾನ ವಿಷಯಗಳ ಬೋಧನೆಯ ಬಗ್ಗೆ ತರಬೇತಿ ನೀಡಿದ್ದು ಇದಕ್ಕೆ ರೂ. 11.50 ಲಕ್ಷ ವೆಚ್ಚ ಮಾಡಲಾಗಿದೆ.

12 ನೇ ಹಣಕಾಸು ಆಯೋಗದಡಿಯಲ್ಲಿ ಹಂತ ಹಂತವಾಗಿ ಡಯಟ್, ಸಿ.ಟಿ.ಇ., ಜಿ.ಟಿ.ಟಿ.ಐ. ಮತ್ತು ಬಿ.ಆರ್.ಸಿ. ಗಳಿಗೆ ಕಟ್ಟಡ ಅಭಿವೃದ್ಧಿ ಹಾಗೂ ಕಂಪ್ಯೂಟರ್ ಶಿಕ್ಷಣಕ್ಕೆ ರೂ. 3615.08 ಲಕ್ಷಗಳ ಅನುದಾನವು ಬಿಡುಗಡೆಯಾಗಿದ್ದು, ಇದರಲ್ಲಿ ರೂ. 3610.08 ಲಕ್ಷಗಳನ್ನು ವೆಚ್ಚ ಮಾಡಿ, ಉದ್ದೇಶಿತ ಕಾರ್ಯಗಳನ್ನು ಸಾಧಿಸಲಾಗಿದೆ.

ಮೈಕ್ರೋಸಾಫ್ಟ್ ತರಬೇತಿಗಾಗಿ ರಾಜ್ಯದ 3 ಸಂಸ್ಥೆಗಳಿಗೆ (ಬೆಂಗಳೂರು ನಗರ ಡಯಟ್, ಧಾರವಾಡ ಡಯಟ್ ಮತ್ತು ಗುಲಬರ್ಗಾ ಸಿ.ಟಿ.ಇ.ಗಳಿಗೆ) ಅನುದಾನ ಬಿಡುಗಡೆ ಮಾಡಲಾಗಿದ್ದು ಇಲಾಖೆಯ ಅಧಿಕಾರಿಗಳಿಗೆ/ ಶಿಕ್ಷಕರಿಗೆ 12 ದಿನಗಳ ಕಂಪ್ಯೂಟರ್ ಆಧಾರಿತ ತರಬೇತಿಯನ್ನು ನೀಡಲಾಗಿದೆ.

## XI) ಸರ್ವ ಶಿಕ್ಷಣ ಅಭಿಯಾನ :

ಡಿ.ಎಸ್.ಇ.ಆರ್.ಟಿ.ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಸ್.ಎಸ್.ಎ. ಶಾಖೆಯು ಸೇವಾ ನಿರತ ಶಿಕ್ಷಕರ ತರಬೇತಿಗಳಿಗೆ ಅನುದಾನ ಹಂಚಿಕೆ, ಸಾಮಗ್ರಿ ತಯಾರಿಕೆ, ಮುದ್ರಣ ಕಾರ್ಯ ಹಾಗೂ ಸರಬರಾಜು ಮಾಡುವ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಡಯಟ್ ಹಾಗೂ ಬಿ.ಆರ್.ಸಿಗಳ ಮೂಲಕ ಶೈಕ್ಷಣಿಕ ತರಬೇತಿಗಳನ್ನು ಆಯೋಜಿಸುತ್ತಾ ನೂತನ ಶೈಕ್ಷಣಿಕ ಆವಿಷ್ಕಾರಗಳನ್ನು ಹುಟ್ಟಿ ಹಾಕುವಲ್ಲಿ ನಿರತವಾಗಿದೆ.

2010–11 ನೇ ಸಾಲಿನಲ್ಲಿ 3 ಮತ್ತು 4 ನೇ ತರಗತಿಗಳ ಇಂಗ್ಲೀಷ್ ಭಾಷೆಯ ಬೋಧನೆಗಾಗಿ ಶಿಕ್ಷಕರ ಸಂಪನ್ಮೂಲ ಸಾಹಿತ್ಯವನ್ನು ರಚಿಸಿದ್ದು, ಮಕ್ಕಳ ಅಭ್ಯಾಸ ಪುಸ್ತಕಗಳನ್ನು ಪರಿಷ್ಕರಣೆ ಮಾಡಲಾಗಿದೆ. ಈ ಬಗ್ಗೆ ಶಿಕ್ಷಕರಿಗೆ ತರಬೇತಿ ನೀಡಲು ಸಂಚಿಕೆ ಸಿದ್ಧಪಡಿಸಲಾಗಿದ್ದು, ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡಲಾಗಿದೆ. ಬ್ಲಾಕ್ ಹಂತದಲ್ಲಿ ಶಿಕ್ಷಕರಿಗೆ ನೀಡುವ 4 ದಿನಗಳ ತರಬೇತಿ ಯಶಸ್ವಿಯಾಗಿ ಮುಕ್ತಾಯಗೊಂಡಿದೆ.

ವ್ಯಕ್ತಿತ್ವ ವಿಕಸನ ತರಬೇತಿಯಾದ ಜೀವನ ವಿಜ್ಞಾನ–2 ತರಬೇತಿಯನ್ನು ಸಂಪನ್ಮೂಲ ವ್ಯಕ್ತಿಗಳಿಗೆ ನೀಡಲಾಗಿದ್ದು, ಈ ಸಂಪನ್ಮೂಲ ವ್ಯಕ್ತಿಗಳು ಡಯಟ್‌ಗಳ ಮೂಲಕ ಶಿಕ್ಷಕರಿಗೆ ಜೀವನ ವಿಜ್ಞಾನ ತರಬೇತಿ ಕಾರ್ಯಕ್ರಮಗಳನ್ನು ನಡೆಸಿರುತ್ತಾರೆ. ಬಿಂಬ–1 ನ್ನು ಆಧರಿಸಿ ಬಿಂಬ–2 ಎಂಬ ಜೆಂಡರ್ ತರಬೇತಿ ಕೈಪಿಡಿಯನ್ನು ತಯಾರಿಸಿ ತರಬೇತಿಯನ್ನು ಸಂಪನ್ಮೂಲ ವ್ಯಕ್ತಿಗಳಿಗೆ ನೀಡಿದ್ದು, ಡಯಟ್‌ಗಳ ಮೂಲಕ ಈ ತರಬೇತಿಯ ಲಾಭವನ್ನು ಶಿಕ್ಷಕರು ಪಡೆದಿದ್ದಾರೆ.

ಕರ್ನಾಟಕ ರಾಜ್ಯವು 1 ರಿಂದ 7 ನೇ ತರಗತಿಯವರೆಗೆ ಚಟುವಟಿಕೆ ಆಧಾರಿತ ಹಾಗೂ ಶಿಶು ಕೇಂದ್ರಿತ ಬೋಧನಾ ವಿಧಾನವನ್ನು ಅಳವಡಿಸಿಕೊಂಡಿದ್ದು, ಇದರ ಮುಂದುವರಿಕೆಯಾಗಿ 8 ನೇ ತರಗತಿ ಬೋಧಿಸುವ ಶಿಕ್ಷಕರಿಗೆ ಬೋಧನೆಯಲ್ಲಿ ಆತ್ಮ ವಿಶ್ವಾಸ ತುಂಬಲು ಮತ್ತು ಕಲಿಕೆಯನ್ನು ಸಂತಸದಾಯಕವಾಗಿಸಲು ಚೈತನ್ಯ–3 ಇಂಗ್ಲೀಷ್, ಸಮಾಜ ವಿಜ್ಞಾನ, ಹಿಂದಿ ತರಬೇತಿಯನ್ನು ಡಯಟ್‌ಗಳ ಮೂಲಕ ನೀಡಲಾಗಿದೆ.

ಕನ್ನಡ, ಇಂಗ್ಲೀಷ್, ಸಮಾಜ ವಿಜ್ಞಾನ, ಹಿಂದಿ, ಗಣಿತ, ವಿಜ್ಞಾನ ವಿಷಯಗಳ ಸಂಪದೀಕರಣದ ಬಗ್ಗೆ ಡಯಟ್‌ಗಳ ಮೂಲಕ ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗಿದೆ. ರಾಜ್ಯದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲೀಷ್ ಬೋಧಿಸುತ್ತಿರುವ ಶಿಕ್ಷಕರಿಗೆ ಇಂಗ್ಲೀಷ್ ಬೋಧನೆಯಲ್ಲಿ ಆತ್ಮ ವಿಶ್ವಾಸ ತುಂಬಲು ಶಿಕ್ಷಕರಿಗೆ ಬೋಧನಾ ಸಾಮರ್ಥ್ಯವನ್ನು ವೃದ್ಧಿಸಲು 20 ದಿನಗಳ ಸ್ಪೋಕನ್ ಇಂಗ್ಲೀಷ್ ಆಫ್ ಟೀಚರ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಎಂಬ ತರಬೇತಿಯನ್ನು 2 ಹಂತಗಳಲ್ಲಿ (7 ದಿನಗಳು + 7 ದಿನಗಳು) 10,000 ಶಿಕ್ಷಕರಿಗೆ ನೀಡಿದ್ದು, 6 ದಿನಗಳ 3 ನೇ ಹಂತದ ತರಬೇತಿಯನ್ನು ಇದೇ 10,000 ಶಿಕ್ಷಕರಿಗೆ 2011–12 ರ ಸಾಲಿನಲ್ಲಿ ನೀಡಲು ಯೋಜಿಸಿದೆ. ಈ ಸಾಲಿನಲ್ಲಿ 700 ಶಿಕ್ಷಕರಿಗೆ ಎರಡು ಹಂತಗಳ ಪ್ರಧಾನ ಸಂಪನ್ಮೂಲ ವ್ಯಕ್ತಿಗಳ ತರಬೇತಿಯನ್ನು ನೀಡಲಾಗಿದ್ದು, ಬಿ.ಆರ್.ಸಿ. ಹಂತದಲ್ಲಿ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಮತ್ತು ಅದರ ಸ್ವಭಾವವನ್ನು ಅರ್ಥೈಸಿ ಸೂಕ್ತ ರೀತಿಯಲ್ಲಿ ಯೋಜಿಸಲು ತರಗತಿ ಪ್ರಕ್ರಿಯೆಗಳನ್ನು ನಡೆಸಲಾಗುತ್ತಿದ್ದು, ತರಗತಿ ಪ್ರಕ್ರಿಯೆಯ ಗುಣಮಟ್ಟವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ಈ ನಿಟ್ಟಿನಲ್ಲಿ **"ತರಗತಿ ಪ್ರಕ್ರಿಯೆ"** ಎಂಬ ತರಬೇತಿ ಸಂಚಿಕೆಯನ್ನು ಸಿದ್ಧಪಡಿಸಲಾಗಿದೆ.

**ವೆಬ್ ಆಧಾರಿತ ತರಬೇತಿ :**

ಡಯಟ್ ಉಪನ್ಯಾಸಕರಿಗೆ ಡಯಟ್‌ಗಳ ಸ್ಥಾಪನೆಯ ಮಹತ್ವ, ಶಾಖಾವಾರು ಕಾರ್ಯ ಚಟುವಟಿಕೆಗಳ ಅರಿವು ಮೂಡಿಸಲು ಹಾಗೂ ಅವು ಯೋಜಿಸುವ ತರಬೇತಿ ಕಾರ್ಯಕ್ರಮಗಳ ನಿರ್ವಹಣೆ, ಅನುದಾನ ಬೇಡಿಕೆ, ಕ್ರಿಯಾ ಸಂಶೋಧನೆ ಮೊದಲಾದವುಗಳಲ್ಲಿ ಕೌಶಲ್ಯ ವೃದ್ಧಿಗಾಗಿ ಆನ್ ಲೈನ್ ಮೂಲಕ ವಿಷಯ ಜ್ಞಾನ ಪಡೆಯುವ ತರಬೇತಿಯಾದ ವೆಬ್ ಆಧಾರಿತ ತರಬೇತಿಯನ್ನು ಡಯಟ್‌ಗಳ 58 ಉಪನ್ಯಾಸಕರಿಗೆ ನೀಡಲಾಗಿದೆ.

## XII) ನಲಿ–ಕಲಿ ವಿಧಾನದ ಅನುಷ್ಠಾನ :

ನಲಿ–ಕಲಿ ವಿಧಾನವು ಮಕ್ಕಳಿಗೆ ಸಂತಸದಾಯಕ ಹಾಗೂ ಚಟುವಟುಕೆ ಆಧಾರಿತ ಕಲಿಕಾ ವಿಧಾನವಾಗಿದ್ದು, ಸ್ವ ಕಲಿಕೆ ಹಾಗೂ ಸ್ವ ವೇಗದ ಕಲಿಕೆಗೆ ಸಹಾಯಕವಾಗಿರುತ್ತದೆ. ಇದರ ಪಠ್ಯ ವಸ್ತುವನ್ನು ಪ್ರಾಥಮಿಕ ಶಾಲಾ ಶಿಕ್ಷಕರು ತಯಾರಿಸಿದ್ದಾರೆ. 2009–10 ರ ಸಾಲಿನಲ್ಲಿ 1 ಮತ್ತು 2ನೇ ತರಗತಿಗಳಲ್ಲಿ ಅನುಷ್ಠಾನವಾದ ನಲಿ–ಕಲಿ ವಿಧಾನವು 2010–11 ನೇ ಸಾಲಿನಲ್ಲಿ 3ನೇ ತರಗತಿಗೆ ವಿಸ್ತರಿಸಲ್ಪಟ್ಟಿದೆ. ಇದಕ್ಕೆ ಪೂರಕವಾಗಿ ರಾಜ್ಯ ಮಟ್ಟದಲ್ಲಿ ಪ್ರಧಾನ ಸಂಪನ್ಮೂಲ ವ್ಯಕ್ತಿಗಳಿಗಾಗಿ ತರಬೇತಿಯನ್ನು ಜೂನ್ 2010 ರಲ್ಲಿ ನೀಡಿದ್ದು, ಈ ಪ್ರಧಾನ ಸಂಪನ್ಮೂಲ ವ್ಯಕ್ತಿಗಳಿಂದ ಜಿಲ್ಲಾ ಮಟ್ಟದಲ್ಲಿ ಬಿ.ಆರ್.ಸಿ. ಮತ್ತು ಸಿ.ಆರ್.ಪಿ. ಗಳಿಗೆ ತರಬೇತಿ ಕೈಗೊಳ್ಳಲಾಗಿದೆ. ತರಗತಿಗಳಲ್ಲಿ ನಲಿಕಲಿ ವಿಧಾನವನ್ನು

ಅನುಷ್ಠಾನಗೊಳಿಸುತ್ತಿರುವ 60,000 ಶಿಕ್ಷಕರಿಗೆ ಈ ತರಬೇತಿಯನ್ನು ಬಿ.ಆರ್.ಸಿ. ಗಳಿಂದ ಜುಲೈ ತಿಂಗಳಲ್ಲಿ ಆಯೋಜಿಸಲಾಗಿತ್ತು. ತರಬೇತಿ ಸಾಹಿತ್ಯ ಬೆಳ್ಳಿ ಚುಕ್ಕಿ–2 ನ್ನು ಸಿಧ್ಧಪಡಿಸಿ ನಲಿಕಲಿ ಶಿಕ್ಷಕರಿಗೆ ನೀಡಲಾಗಿದ್ದು ಪರಿಷ್ಕೃತ ಕಲಿಕಾ ಸಾಮಗ್ರಿಗಳನ್ನು ಮುದ್ರಿಸಿ ಶಾಲೆಗಳಿಗೆ ಸರಬರಾಜು ಮಾಡಲಾಗಿದೆ. 1 ಮತ್ತು 2 ನೇ ತರಗತಿಯ ಕಲಿಕಾ ಸಾಮಗ್ರಿಗಳಲ್ಲಿ ಆಗಿರುವ ಬದಲಾವಣೆಗಳ ಕುರಿತು 9000 ಶಿಕ್ಷಕರಿಗೆ ಜುಲೈ 2010 ರಲ್ಲಿ ಮಾರ್ಗದರ್ಶನವನ್ನು ಉಪಗ್ರಹ ಆಧಾರಿತ ತರಬೇತಿಯ ಮೂಲಕ ನೀಡಲಾಗಿದೆ. 2011–12 ನೇ ಸಾಲಿಗೆ 1, 2 ಹಾಗೂ 3ನೇ ತರಗತಿಯ ನಲಿ ಕಲಿ ಕಲಿಕಾ ಸಾಮಗ್ರಿಗಳನ್ನು ಬಹು ವರ್ಣದಲ್ಲಿ ನೀಡಲು ಕ್ರಮ ಕೈಗೊಳ್ಳಲಾಗಿದೆ.

**ನಿರ್ದೇಶಕರು**

ಡಿ.ಎಸ್.ಇ.ಆರ್.ಟಿ.